ವಿಷಯ :- ದ್ವಿತೀಯ ಪಿ.ಯು.ಸಿ.ಯಲ್ಲಿ ಕರ್ನಾಟಕ ಇತಿಹಾಸ ಪಠ್ಯವನ್ನು ಮುಂದುವರಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1029 (1644)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕಳೆದ 14 ವರ್ಷಗಳಿಂದ ದ್ವಿತೀಯ ಪಿ.ಯು.ಸಿ. ತರಗತಿಗೆ ಪಠ್ಯವಾಗಿದ್ದ ಕರ್ನಾಟಕ ಇತಿಹಾಸವನ್ನು ಸರ್ಕಾರ ರದ್ದುಪಡಿಸಿರುವುದು ನಿಜವಲ್ಲವೇ?

2. ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

3. ಕರ್ನಾಟಕ ಇತಿಹಾಸ ಪಠ್ಯವಾಗಿದ್ದರೆ ವಿದ್ಯಾರ್ಥಿಗಳು ರಾಜ್ಯದ ಇತಿಹಾಸವನ್ನು ತಿಳಿದುಕೊಳ್ಳಲು ಸಹಾಯಕವಾಗುವುದಲ್ಲವೇ?

4. ಹಾಗಿದ್ದಲ್ಲಿ ಮೇಲ್ಕಂಡ ಪಠ್ಯವನ್ನು ಮುಂದುವರೆಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

1. ನಿಜವಲ್ಲ.

1995-96 ರಿಂದ ಜಾರಿಗೆ ಬಂದ ಹೊಸ ಪಠ್ಯಕ್ರಮದಲ್ಲಿ ಭಾರತೀಯ ಇತಿಹಾಸದ ಜೊತೆ ಕರ್ನಾಟಕ ಇತಿಹಾಸ ಪಠ್ಯಕ್ರಮ ಸಹ ಸೇರಿದೆ.

2. ಶಿಕ್ಷಣ ತಜ್ಞರ ಸಮಿತಿಯ ಶಿಫಾರಸ್ಸಿನ ಮೇಲೆ ಭಾರತೀಯ ಇತಿಹಾಸ ಪಠ್ಯವಸ್ತುವನ್ನು ನಿಗದಿಪಡಿಸಲಾಗಿತ್ತು.

3. ಹೌದು.

4. 1994-95 ರಲ್ಲಿ ಇದ್ದ ಕರ್ನಾಟಕ ಇತಿಹಾಸ ಪಠ್ಯಕ್ರಮವನ್ನು 1996-97 ಮತ್ತು 1997-98 ನೇ ಸಾಲಿಗೆ ಮುಂದುವರಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ :- ಸರ್ಕಾರಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಬೋಧಕೇತರ ಸಿಬ್ಬಂದಿಗೆ ಇನ್‌ಕ್ರಿಮೆಂಟ್ ನೀಡದೇ ಇರುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1030 (1646)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?